ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, ಈಗತಾನೇ ಉತ್ತರ ಬಂದಿರುವುದರಿಂದ ಅದರ ನಕಲನ್ನು ಅವರಿಗೆ ಕೊಡುವುದಕ್ಕಾಗಿಲ್ಲ. ದಯಮಾಡಿ ಕ್ಷಮಿಸಬೇಕು ಎಂದು ತಮ್ಮ ಮೂಲಕ ಕೇಳುತ್ತೇನೆ, ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಪ್ರೌಢಶಾಲೆ, ಅಲ್ಪಾಡಿ, ಇದು ಮಲೆನಾಡು ಅಭಿವೃದ್ಧಿ ಮಂಡಳಿ, ಕುಂದಾಪುರ ಸಂಸ್ಥೆಯಿಂದ ಸ್ಥಾಪಿಸಲ್ಪಟ್ಟ ಸಂಸ್ಥೆಯಾಗಿತ್ತು. ಹಾಗೂ ಇದಕ್ಕೆ ಉದಾರವಾಗಿದ್ದ ಧನ ಸಹಾಯ ಮಾಡಿದ ಶ್ರೀ ಚಾರುಮಟ್ಟಿ ನಾರಾಯಣ ಶೆಟ್ಟಿಯವರ ಹೆಸರನ್ನು ಇಡಲಾಗಿತ್ತು. ಅನಂತರ ಈ ಖಾಸಗೀ ಪ್ರೌಢಶಾಲೆಯನ್ನು ಆಡಳಿತ ಮಂಡಳಿಯ ಒಪ್ಪಿಗೆ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಪೂರ್ವಾನುಮತಿ ಮೇರೆಗೆ ಆದೇಶ ಸಂಖ್ಯೆ ಡಿಸಿಪಿ ಜಿಹೆಚ್ಎಸ್ 66 ದಿನಾಂಕ 11-4-1966ರಂತೆ ಕುಂದಾಪುರ ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ವಹಿಸಿ ಕೊಡಲಾಗಿತ್ತು.

ತಾಲ್ಲೂಕು ಅಭಿವೃದ್ಧಿ ಮಂಡಳಿಯ ವಶಕ್ಕೆ ಬಂದ ನಂತರ ಈ ಸಂಸ್ಥೆಯ ಹೆಸರನ್ನು ತಾಲ್ಲೂಕು ಅಭಿವೃದ್ಧಿ ಮಂಡಳಿ ಪ್ರೌಢಶಾಲೆ, ಅಲ್ಪಾಡಿ, ಎಂದು ತಾಲ್ಲೂಕು ಅಭಿವೃದ್ಧಿ ಮಂಡಳಿ, ಕುಂದಾಪುರ ಪುನರ್ ನಾಮಕರಣ ಮಾಡಲಾಗಿತ್ತು. ಸರ್ಕಾರವಾಗಲೀ, ಜಿಲ್ಲಾ ಪಂಚಾಯತಿಯಾಗಲೀ ಈ ಹೆಸರನ್ನು ಬದಲಾವಣೆ ಮಾಡಿರುವುದಿಲ್ಲ. ಶಾಲೆಯನ್ನು 1971ರಿಂದ ಸರ್ಕಾರದ ವಶಕ್ಕೆ ತೆಗೆದುಕೊಂಡ ನಂತರ ಶಾಲೆಯ ಹೆಸರನ್ನು ಸರ್ಕಾರಿ ಪ್ರೌಢ ಶಾಲೆ, ಅಲ್ಪಾಡಿ ಎಂದು ಬದಲಾಯಿಸಲಾಗಿದೆ. ಆಮೇಲೆ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ನಂತರ, ಶಾಲೆಯ ಹೆಸರನ್ನು ಜಿಲ್ಲಾ ಪರಿಷತ್ ಪ್ರೌಢಶಾಲೆ, ಅಲ್ಪಾಡಿ ಎಂದು ನಾಮಕರಣ ಮಾಡಲಾಗಿದೆ. ಚಾರುಮಕ್ಕಿ ನಾರಾಯಣ ಶೆಟ್ಟರ ಹೆಸರನ್ನು ಶಾಲಾ ಫಲಕದಿಂದ ತೆಗೆದು ಹಾಕುವಲ್ಲಿ ಸರ್ಕಾರವಾಗಲಿ ಅಥವಾ ಜಿಲ್ಲಾ ಪರಿಷತ್ ಆಗಲಿ ಯಾವುದೇ ಆದೇಶ ಮಾಡಿರುವುದಿಲ್ಲ. ಹಾಗೂ ಹೆಸರನ್ನು ಬದಲಾಯಿಸಬೇಕೆಂದು ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಸರ್ಕಾರದಿಂದ ನಿರ್ದೇಶನ ನೀಡಿದ ದಾಖಲೆಗಳೂ ಸಹ ಇಲ್ಲ. ಆದುದರಿಂದ ಪುನಃ ಈ ಶಾಲೆಗೆ ಚಾರುಮಕ್ಕಿ ನಾರಾಯಣ ಶೆಟ್ಟರ ಹೆಸರನ್ನು ಇಡುವ ಬಗ್ಗೆ ಸರ್ಕಾರ ಹಂತದಲ್ಲಿ ಕ್ರಮ ತೆಗೆದುಕೊಳ್ಳಬೇಕಾಗಿದೆ.

(7) ಕೋಲಾರ ಜಿಲ್ಲೆಯ ವಿದ್ಯುತ್ ಗುತ್ತಿಗೆದಾರರಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ದೈನಂದಿನ ಕೆಲಸಗಳಿಗೆ ಉಂಟಾಗಿರುವ ತೊಂದರೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉಪಾಧ್ಯಕ್ಷರೆ, ಕೋಲಾರ ಜಿಲ್ಲೆಯ ವಿದ್ಯುತ್ ಗುತ್ತಿಗೆದಾರರಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ದೈನಂದಿನ ಕೆಲಸಗಳಲ್ಲಿ ಉಂಟಾಗುತ್ತಿರುವ ತೊಂದರೆಗಳು, ಕಾಮಗಾರಿ ಕೆಲಸಗಳ ಕೂಲಿ ದರಗಳ ಏರಿಕೆ, ಮಂಡಳಿಯ ದರ ಪಟ್ಟಿಯಂತೆ ಹಣ ನೀಡದಿರುವುದು, ಕೂಲಿ ಹಣ ಪಾವತಿಯಲ್ಲಿ ಸುದೀರ್ಘ ವಿಳಂಬ ಮತ್ತು ಕಾಲಕಲಕ್ಕೆ ಜಾರಿಯಾಗುತ್ತಿರುವ ಅಸಂಬದ್ಧ ಕಾನೂನುಗಳು ಮತ್ತು ಇತರೆ ಬೇಡಿಕೆಗಳೊಂದಿಗೆ "The Licensed Electrical Contractor's Assocication of Karnataka".....ಈ ಸಂಘದಿಂದ ದಿನಾಂಕ 4-9-95ರಿಂದ ಗುತ್ತಿಗೆದಾರರು ಮುಷ್ಕರ ಹೂಡಿ ಈ ದಿನಕ್ಕೆ 9 ದಿನ ಆಗಿದೆ ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೆ, ಕೋಲಾರ ಜಿಲ್ಲೆಯ ವಿದ್ಯುತ್ ಗುತ್ತಿಗೆದಾರರಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಕೆ.ಜಿ.ಎಫ್. ಕಾರ್ಯ ಮತ್ತು ಪಾಲನ ವಿಭಾಗಗಳು ದೈನಂದಿನ ಕೆಲಸಗಳಲ್ಲಿ ಸಹಕಾರವನ್ನು ನೀಡುತ್ತಿದೆ. ಕಾಮಗಾರಿ ಕೆಲಸಗಳ ಕೂಲಿ

ದರಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ. ಮಂಡಳಿಯ ದರ ಪಟ್ಟಿಗಳ ಪ್ರಕಾರವೇ ಅಂದಾಜು ಪಟ್ಟಿಗಳನ್ನು ತಯಾರಿಸಲಾಗುತ್ತಿದೆ ಮತ್ತು ದರ ಪಟ್ಟಿಗಳ ಪ್ರಕಾರ ಹಣವನ್ನು ಪಾವತಿ ಮಾಡಲಾಗುತ್ತಿದೆ, ಲೇಬರ್ ಕಂಟ್ರಾಕ್ಟ್ ಬಿಲ್ಲುಗಳನ್ನು ಆದಷ್ಟು ಶೀಘ್ರಗತಿಯಲ್ಲಿ ಪರಿಶೀಲಿಸಿ, ವಿಲೇವಾರಿ ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಆದರೆ ಬಹಳ ಹಳೆಯ ಬಿಲ್ಲುಗಳನ್ನು ವಿಲೇವಾರಿ ಮಾಡಲು ಸಾಮಗ್ರಿಗಳ ಇನ್ವೆಂಟರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ವಿಷಯದಲ್ಲಿ ವಿದ್ಯುತ್ ಗುತ್ತಿಗೆದಾರರೂ ಮಂಡಳಿಯೊಡನೆ ಸಹಕರಿಸುವುದು ಅಗತ್ಯವಾಗಿದೆ.

ಕಾಲ ಕಾಲಕ್ಕೆ ನಿಯಮಗಳನ್ನು ಬದಲಾಯಿಸಲಾಗುತ್ತಿದೆಯೆನ್ನುವ ಗುತ್ತಿಗೆದಾರರ ದೂರು ಸರಿಯಲ್ಲ. ಕೇವಲ ಗುತ್ತಿಗೆದಾರರ ಹಿತಾಸಕ್ತಿಗಳನ್ನು ಗಮನಿಸಿ. ನೀತಿ ನಿಯಮಗಳನ್ನು ರೂಪಿಸುವುದು ಏಕ ಪಕ್ಷೀಯವಾಗುತ್ತದೆ. ಗ್ರಾಹಕರು ಮಂಡಳಿಯ ಬೆನ್ನೆಲುಬುಗಳಾಗಿರುವುದರಿಂದ ಗ್ರಾಹಕರ ಹಿತರಕ್ಷಣೆಯನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಮುಷ್ಕರ ನಿರತ "ದಿ ಲೈಸನ್ಸ್ಡ್ ಎಲೆಕ್ಟ್ರಿಕಲ್ ಕಂಟ್ರಾಕ್ಟರ್ಸ್ ಅಸೋಸಿಯೇಶನ್ ಆಫ್ ಕರ್ನಾಟಕ" ದ ಪದಾಧಿಕಾರಿಗಳೊಂದಿಗೆ ಸಮಾಲೋಚನೆಯನ್ನು ಮಾಡಲಾಗುತ್ತಿದ್ದು, ಅವರ ನ್ಯಾಯಯುತ ಬೇಡಿಕೆಗಳನ್ನು ನಿಯಮಗಳ ಚೌಕಟ್ಟಿನೊಳಗೆ ಈಡೇರಿಸುವಲ್ಲಿ ಮಂಡಳಿಯು ಉತ್ಸುಕವಾಗಿದೆ.

(8) ರಾಜಾಜಿನಗರ ವ್ಯಾಪ್ತಿ ಹರಿಶ್ಚಂದ್ರಘಾಟನಲ್ಲಿ ಇರುವ ವಿದ್ಯುತ್ ಚಿತಾಗಾರದಿಂದ ಸುತ್ತ ಮುತ್ತ ನಿವಾಸಿಗಳಿಗೆ ಉಂಟಾಗಿರುವ ತೊಂದರೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೆ, ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಹರಿಶ್ಚಂದ್ರ ಘಾಟಿನಲ್ಲಿ ಇರುವ ವಿದ್ಯುತ್ ಚಿತಾಗಾರದಿಂದ ಸುತ್ತ ಮುತ್ತಲಿನ ನಿವಾಸಿಗಳು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ಬಗ್ಗೆ ನಿವಾಸಿಗಳು ಮಾಡಿರುವ ಅನೇಕ ಪ್ರಯತ್ನಗಳು ಫಲ ನೀಡಿಲ್ಲ. ಚಿತಾಗಾರದಿಂದ ಹೊರಬರುತ್ತಿರುವ ಹೊಗೆ, ವಾಸನೆ, ಧೂಳು ಅಲ್ಲಿನ ನಿವಾಸಿಗಳ ದೈನಂದಿನ ಜೀವನವನ್ನು ಜರ್ಜಿರಿತಗೊಳಿಸಿವೆ. ವಸತಿ ಗೃಹಗಳ ನಡುವೆ ಇದ್ದು ನಾಗರೀಕರ ಆರೋಗ್ಯಕ್ಕೆ ಮಾರಕವಾಗಿರುವ ಈ ಚಿತಾಗಾರವನ್ನು ಬೆಂಗಳೂರಿನ ಹೊರ ವಲಯಕ್ಕೆ ಸ್ಥಳಾಂತರ ಮಾಡುವ ಬಗ್ಗೆ ಹಾಗೂ ಈಗ ತುರ್ತಾಗಿ ಅಗತ್ಯ ಕ್ರಮ ಜರುಗಿಸಿ ಚಿತಾಗಾರದಿಂದ ನಿವಾಸಿಗಳಿಗೆ ಉಂಟಾಗುತ್ತಿರುವ ಸಂಕಷ್ಟವನ್ನು ಪರಿಹರಿಸಲು ತೆಗೆದುಕೊಳ್ಳಬೇಕಾದ ಅವಶ್ಯಕತೆಯ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಅಜಯಕುಮಾರ ಸರ್ ನಾಯಕ್ (ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು) (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ವಿಲ್ಸನ್‌ಗಾರ್ಡನ್‌ನಲ್ಲಿರುವ ವಿದ್ಯುತ್ ಚಿತಾಗಾರಕ್ಕೆ ಇತ್ತೀಚೆಗೆ ಪ್ರಾಯೋಗಿಕವಾಗಿ ವಿದ್ಯುತ್‌ಚಿತಾಗಾರದಿಂದ ಹೊರ ಸೂಸುವ ವಾಸನೆಯನ್ನು ಕಡಿಮೆ ಮಾಡಲು ತೈಲ ಶುದ್ದೀಕರಣ ಉಪಕರಣವನ್ನು ಅಳವಡಿಸಲಾಗಿದ್ದು, ಇದು ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಸಾಕಷ್ಟು ಉಪಯೋಗವಾಗುತ್ತಿದೆ. ಆದರೆ ಇದರಲ್ಲಿರುವ ಒಂದು ಅನಾನುಕೂಲವೆಂದರೆ, ವಿದ್ಯುತ್ ಒಲೆಯಿಂದ ಬರುವ ಹೊಗೆಯು ಹೆಚ್ಚಿನ ಶಾಖದಿಂದ ಕೂಡಿರುವುದರಿಂದ ಮೇಲ್ಕಂಡ ತೈಲ ಶುದ್ದೀಕರಣ ಉಪಕರಣಕ್ಕೆ ಬೆಂಕಿ ಹತ್ತಿಕೊಳ್ಳುವ ಅಪಾಯವಿರುತ್ತದೆ. ಆದ್ದರಿಂದ ತೈಲ ಶುದ್ದೀಕರಣಕ್ಕೆ ಹೋಗುವ ಹೊಗೆಯು ಶಾಖವನ್ನು ಯಾವುದಾದರೂ ರೀತಿಯಲ್ಲಿ ಕಡಿಮೆ ಮಾಡಬೇಕಾಗಿರುತ್ತದೆ. ಹಾಗೂ ಇದನ್ನು ಎರಡು ರೀತಿಯಿಂದ ಮಾಡಬಹುದಾಗಿರುತ್ತದೆ.